# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)** |
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **544** |
| **ಉತ್ತರಿಸಬೇಕಾದ ದಿನಾಂಕ** | : | **11.03.2025** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮತ್ತು ಹಾಲು ಉತ್ಪಾದಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ಹಾಲು ಉತ್ಪಾದಕರ ಸಂಖ್ಯೆಯ ವಿವರ ಈ ಕೆಳಕಂಡಂತಿರುತ್ತದೆ:<br><table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಸಂಘಗಳ ಸಂಖ್ಯೆ</th><th>ಉತ್ಪಾದಕರ ಸಂಖ್ಯೆ</th></tr>
<tr><td>1</td><td>ಉತ್ತರಕನ್ನಡ</td><td>296</td><td>11251</td></tr>
<tr><td>2</td><td>ಧಾರವಾಡ</td><td>207</td><td>11973</td></tr>
<tr><td>3</td><td>ಬೆಳಗಾವಿ</td><td>616</td><td>31494</td></tr>
</table></td></tr>
<tr><td>ಆ)</td><td>ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ ದರ ಹಾಗೂ ಪ್ರೋತ್ಸಾಹ ಧನದ ದರ ಎಷ್ಟು; ಹಾಗೂ ಪ್ರೋತ್ಸಾಹಧನವೆಷ್ಟು; (ಮಾಹಿತಿ ನೀಡುವುದು)</td><td>ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯ 16 ಜಿಲ್ಲಾ ಹಾಲು ಒಕ್ಕೂಟಗಳಲ್ಲಿನ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ ಸರಾಸರಿ ಪ್ರಸ್ತುತ ದರ ರೂ.31.49 ಹಾಗೂ ರಾಜ್ಯ ಸರ್ಕಾರದಿಂದ ಪ್ರತಿ ಲೀ. ಹಾಲಿಗೆ ರೂ.5/- ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳ ವಿವರ ಕೆಳಕಂಡಂತಿದೆ:<br><table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಪ್ರತಿ ಲೀ. ಹಾಲಿಗೆ ನೀಡುತ್ತಿರುವ ದರ ರೂ.ಗಳಲ್ಲಿ</th><th>ಪ್ರೋತ್ಸಾಹ ಧನ ರೂ.ಗಳಲ್ಲಿ</th></tr>
<tr><td>1</td><td>ಉತ್ತರಕನ್ನಡ</td><td>31.00</td><td>5.00</td></tr>
<tr><td>2</td><td>ಧಾರವಾಡ</td><td>31.00</td><td>5.00</td></tr>
<tr><td>3</td><td>ಬೆಳಗಾವಿ</td><td>30.10</td><td>5.00</td></tr>
</table></td></tr>
</table>

| | | |
|---|---|---|
| ಇ) | ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು? | ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಅಭಿವೃದ್ಧಿ ಪಡಿಸಲು ಹಾಲು ಉತ್ಪಾದಕರ ಸದಸ್ಯರುಗಳಿಗೆ ಹೈನುಗಾರಿಕೆಯನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಹಾಗೂ ಕಹಾಮದಿಂದ ವಿವಿಧ ಯೋಜನೆಗಳ ಮೂಲಕ ಹೈನು ರಾಸು ಖರೀದಿಗಾಗಿ ಬಡ್ಡಿ ರಹಿತ, ಸುತ್ತು ನಿಧಿಯನ್ನು ಸಾಲದ ರೂಪದಲ್ಲಿ ನೀಡಲಾಗುವುದು, ಅಲ್ಲದೆ, ವಿವಿಧ ರೀತಿಯ ತಾಂತ್ರಿಕ ತರಬೇತಿಗಳನ್ನು ಕರ್ನಾಟಕ ಹಾಲು ಮಹಾಮಂಡಳ ವ್ಯಾಪ್ತಿಯಲ್ಲಿನ 4 ತರಬೇತಿ ಕೇಂದ್ರಗಳಿಂದ (ಮೈಸೂರು, ಧಾರವಾಡ, ಬೆಂಗಳೂರು ಮತ್ತು ಕಲಬುರಗಿ) ಹೈನುರಾಸು ನಿರ್ವಹಣೆ, ಸಂಘದ ಕಾರ್ಯದರ್ಶಿ/ ಅಧ್ಯಕ್ಷರು/ಹಾಲು ಪರೀಕ್ಷಕರು/ಸಂಘದ ಆಡಳಿತ ಮಂಡಳಿ, ಸಿಬ್ಬಂದಿಗಳಿಗೆ, ಕಂಪ್ಯೂಟರ್ ತರಬೇತಿ ಮತ್ತು ಸ್ವಸಹಾಯ ಗುಂಪಿನ ಪ್ರತಿನಿಧಿಗಳಿಗೆ ಆಯುರ್ವೇದ ಔಷಧಿ, ಪ್ರಥಮ ಚಿಕಿತ್ಸೆ, ಪಶು ಸಖಿ ತರಬೇತಿಯನ್ನು ನೀಡಲಾಗುವುದು. ಗ್ರಾಮೀಣ ಮಟ್ಟದಲ್ಲಿ ರಾಜ್ಯ ಸರ್ಕಾರ ಮತ್ತು ಕಹಾಮದ ಅನುದಾನದ ಮೂಲಕ ಅರಿವು ಕಾರ್ಯಕ್ರಮಗಳಾದ ಆರೋಗ್ಯ ಮತ್ತು ಪೌಷ್ಠಿಕ ಆಹಾರ, ಶುದ್ಧ ಹಾಲು ಉತ್ಪಾದನೆ, ಪಶು ಆಹಾರ ಮತ್ತು ಮೇವು ಅಭಿವೃದ್ಧಿ, ಲಿಂಗ ಸೂಕ್ಷ್ಮತೆ, ಕಾನೂನು ಸಾಕ್ಷರತೆ ಬಗ್ಗೆ ಅರಿವು ನೀಡಲಾಗುವುದು. ವಿಶೇಷವಾಗಿ ಮಹಿಳೆಯರಿಗೆ ಶೈಕ್ಷಣಿಕ ಅಧ್ಯಯನ ಪ್ರವಾಸಕ್ಕಾಗಿ ಗುಜರಾತಿನ ಅಮೂಲ್ ಗೆ ಕಳುಹಿಸಲಾಗುತ್ತಿದೆ. |

**ಸಂಖ್ಯೆ: ಸಿಒ 39 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು